ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
Karnataka Neeravari Nigam Limited
(A Government of Karnataka Enterprise)

ಸಂ:ಕನೀನಿ/ಆರ್ಥಿಕ/ಐಬಿಎಸ್/ಎಫ್‌ಡಿಆರ್/2023-24/1632 ದಿ:27.07.2023

## ಸುತ್ತೋಲೆ

ವಿಷಯ: ಕಾಮಗಾರಿ ಬಿಲ್ಲುಗಳ ಭದ್ರತಾ ಠೇವಣಿ ಮೊತ್ತದ ಎದುರಾಗಿ ಸಲ್ಲಿಸಲಾಗುವ ಐ.ಬಿ.ಎಸ್/ಎಫ್.ಡಿ.ಆರ್‌ಗಳನ್ನು ನಿರ್ವಹಿಸುವ/ಒಪ್ಪಿಕೊಳ್ಳುವ/ಬಿಡುಗಡೆಗೊಳಿಸುವ ಕುರಿತು ಮಾರ್ಗಸೂಚಿಗಳು.

ಉಲ್ಲೇಖ:
1. ಈ ಸುತ್ತೋಲೆ ಸಂ.ಕನೀನಿ/ಆರ್ಥಿಕ/ಐ.ಬಿ.ಎಸ್/2020-21/6351 ದಿ:15.01.2021.
2. ಸರ್ಕಾರದ ಸುತ್ತೋಲೆ ಸಂ.410 ವೆಚ್ಚ-12/2022 ದಿ:05-07-2022.
3. ಈ ಕಛೇರಿ ಪತ್ರ ಸಂ.ಕನೀನಿ/ತಾಂತ್ರಿಕ/ಸುತ್ತೋಲೆ/2022-23/2381 ದಿ:19.07.2022.
4. ಈ ಪತ್ರ ಸಂ.ಕನೀನಿ/ಎಸ್.ಬಿ.ಡಿ/2023/7224 ದಿ:30-01-2023.

*********

ಕರ್ನಾಟಕ ನೀರಾವರಿ ನಿಗಮದಡಿಯಲ್ಲಿ ವಿವಿಧ ಯೋಜನೆಗಳ ಕಾಮಗಾರಿಗಳ ಟೆಂಡರ್ ಷರತ್ತುಗಳನ್ವಯ ಐ.ಬಿ.ಎಸ್/ಎಫ್.ಡಿ.ಆರ್‌ಗಳನ್ನು ಒಪ್ಪಿಕೊಳ್ಳುವ, ನಿರ್ವಹಿಸುವ ಮತ್ತು ಬಿಡುಗಡೆಗೊಳಿಸುವ ಕುರಿತು ಉಲ್ಲೇಖ (1) ರ ಸುತ್ತೋಲೆಯಲ್ಲಿ ನಿರ್ದೇಶನಗಳನ್ನು ನೀಡಲಾಗಿರುತ್ತದೆ. ಉಲ್ಲೇಖ (2) ರ ಸರ್ಕಾರದ ಸುತ್ತೋಲೆ ಹಾಗೂ ಉಲ್ಲೇಖ (3) ರ ಈ ಕಛೇರಿ ಪತ್ರದ ಮೇರೆಗೆ ನಿಗಮದಲ್ಲಿ ಪಿ.ಡಬ್ಲ್ಯೂ.ಜಿ ಫಾರ್ಮ 65 ಬಳಕೆಯನ್ನು ಸ್ಥಗಿತಗೊಳಿಸಲಾಗಿರುತ್ತದೆ. ಉಲ್ಲೇಖ (2) ರ ಸರ್ಕಾರದ ಸುತ್ತೋಲೆಯಲ್ಲಿ ತಿಳಿಸಿದಂತೆ ಈ ಹಿಂದೆ ಅಳವಡಿಸಲಾಗುತ್ತಿದ್ದ ನಿಗಮದ ಟೆಂಡರ್ ದಸ್ತಾವೇಜಿನ (ಪಿ.ಡಬ್ಲ್ಯೂ.ಜಿ ಫಾರ್ಮ 65) ಬದಲಿಗೆ ಬಿಡ್ ಡಾಕ್ಯುಮೆಂಟ್ KW1, KW2, KW3 & KW4 ನಮೂನೆಗಳನ್ನು ಅಳವಡಿಸಿಕೊಳ್ಳಲಾಗಿರುತ್ತದೆ ಹಾಗೂ ನಿಗಮದಲ್ಲಿ ಪ್ರಸ್ತುತ ಮಾದರಿ ಟೆಂಡರ್ ದಾಖಲೆಗಳನ್ನು ಬಳಕೆ ಮಾಡಲಾಗುತ್ತಿದೆ.

2. ಉಲ್ಲೇಖ (4)ರ ಈ ಕಛೇರಿ ಪತ್ರದಲ್ಲಿ ನಿಗಮದಡಿ ಆಹ್ವಾನಿಸಲಾಗುವ ಟೆಂಡರ್‌ಗಳಲ್ಲಿ ನಮೂದಿಸಲಾಗಿರುವ ಅಂಶಗಳನ್ನು ಹಾಗೂ KW ಕ್ಲಾಸ್‌ಗೆ ಅವಶ್ಯ ಮಾರ್ಪಾಡುಗಳನ್ನು ಡಿ.ಟಿ.ಪಿಯಲ್ಲಿ ಅಳವಡಿಸಿ ನಿಯಮಾನುಸಾರ ಕ್ರಮ ವಹಿಸಲು ನಿಗಮದ ಎಲ್ಲಾ ಮುಖ್ಯ ಅಭಿಯಂತರರುಗಳಿಗೆ ಸೂಚಿಸಲಾಗಿರುತ್ತದೆ. ಅಲ್ಲದೇ, ಸದರಿ ಪತ್ರದ ಕ್ರಮ ಸಂ.6 ರಲ್ಲಿ ಇ.ಎಂ.ಡಿ ಮತ್ತು ಕ್ರಮ ಸಂ.7 ರಲ್ಲಿ ಭದ್ರತಾ ಠೇವಣಿ ಮಾರ್ಪಾಡು ಬಗ್ಗೆ ಪ್ರಸ್ತಾಪಿಸಲಾಗಿರುತ್ತದೆ.

3. ಮಾದರಿ ಟೆಂಡರ್ ದಾಖಲೆಗಳನ್ನು ಬಳಕೆ ಮಾಡಿ (KW1, KW2, KW3 & KW4 ನಮೂನೆಗಳನ್ನು) ಆಹ್ವಾನಿಸುವ ಟೆಂಡರುಗಳಲ್ಲಿ ಯಶಸ್ವಿ ಗುತ್ತಿಗೆದಾರರಿಂದ ದಿ:31-03-2023 ರ ನಂತರ ಒಪ್ಪಂದವಾಗುವ ಕಾಮಗಾರಿಗಳ ಗುತ್ತಿಗೆ ಒಪ್ಪಂದದ ಪ್ರಕಾರ ಭದ್ರತಾ ಠೇವಣಿಯನ್ನು (Excluding Reserve Tenders) ಪಡೆಯಬೇಕಾಗಿರುತ್ತದೆ. ಭದ್ರತಾ ಠೇವಣಿ ಮೊತ್ತವನ್ನು ಯಶಸ್ವಿ ಗುತ್ತಿಗೆದಾರರು ಐ.ಬಿ.ಎಸ್/ಎಫ್.ಡಿ.ಆರ್/ಬಿ.ಜಿ ರೂಪದಲ್ಲಿ ವಿಭಾಗ ಕಛೇರಿಗೆ ಸಲ್ಲಿಸುತ್ತಿರುತ್ತಾರೆ. ವಿಭಾಗ ಕಛೇರಿಗೆ ಹಾಜರು ಪಡಿಸುವ ಮೂಲ ಐ.ಬಿ.ಎಸ್/ಎಫ್.ಡಿ.ಆರ್‌ಗಳನ್ನು ಮುಖ್ಯ ಲೆಕ್ಕಾಧಿಕಾರಿಗಳು, ಕನೀನಿ, ಕೇಂದ್ರ ಕಛೇರಿ, ಧಾರವಾಡ ಇವರಿಗೆ ಸಲ್ಲಿಸದೇ ಇರುವುದನ್ನು ಗಂಭೀರವಾಗಿ ಪರಿಗಣಿಸಿ ಈ ಕೆಳಗಿನಂತೆ ಮಾರ್ಗಸೂಚಿಗಳನ್ನು ನೀಡಲಾಗಿದೆ.

(i) ಯಶಸ್ವಿ ಗುತ್ತಿಗೆದಾರರಿಂದ ಪಡೆಯಲಾದ ಮೂಲ ಐ.ಬಿ.ಎಸ್/ಎಫ್.ಡಿ.ಆರ್ ಗಳನ್ನು ನಿಗದಿತ ಸಮಯದಲ್ಲಿ ಮುಖ್ಯ ಲೆಕ್ಕಾಧಿಕಾರಿಗಳು ಕನೀನಿ ಕೇಂದ್ರ ಕಛೇರಿ ಧಾರವಾಡ ಇವರಿಗೆ ಸಲ್ಲಿಸುವ ಮೂರ್ವದಲ್ಲಿ ಸಂಬಂಧಪಟ್ಟ ಕಾರ್ಯಪಾಲಕ ಇಂಜಿನೀಯರವರು ಐ.ಬಿ.ಎಸ್/ಎಫ್.ಡಿ.ಆರ್‌ಗಳ ನೈಜತೆಯನ್ನು ಪರಿಶೀಲಿಸಿಕೊಂಡು ಸಂಬಂಧಪಟ್ಟ ಬ್ಯಾಂಕಿನಿಂದ ಐ.ಬಿ.ಎಸ್/ಎಫ್.ಡಿ.ಆರ್ Confirmation ಪಡೆಯುವುದು.

*A Concern for Water*



Regd. Office : 4th Floor, Coffee Board Building, No. 1, Dr. B.R. Ambedkar Veedhi, Bangalore - 560 001 Ph : 22283074-78,
CIN : U85110KA1998SGC024603 GST No.: 29AABCK6647B1ZK Website : www.knnlindia.com

(ii) ಮೂಲ ಐ.ಬಿ.ಎಸ್/ಎಫ್.ಡಿ.ಆರ್‌ಗಳ ನೈಜತೆ ಕುರಿತು ವ್ಯತ್ಯಾಸವಾಗಿ ನಕಲು (Xerox) ಐ.ಬಿ.ಎಸ್/ಎಫ್.ಡಿ.ಆರ್‌ಗಳನ್ನು ಪಡೆದುಕೊಂಡಲ್ಲಿ ಅದಕ್ಕೆ ನೇರವಾಗಿ ಕಾರ್ಯಪಾಲಕ ಇಂಜನೀಯರವರು ಜವಾಬ್ದಾರರಾಗಿರುತ್ತಾರೆ. ಯಾವುದೇ ಕಾರಣಕ್ಕೂ ಬ್ಯಾಂಕ್ Confirmation ಇಲ್ಲದೇ ಮೂಲ ಐ.ಬಿ.ಎಸ್/ಎಫ್.ಡಿ.ಆರ್ ಗಳನ್ನು ಗುತ್ತಿಗೆದಾರರಿಂದ ಸ್ವೀಕರಿಸತಕ್ಕದಲ್ಲ. ಮೂಲ ಐ.ಬಿ.ಎಸ್/ಎಫ್.ಡಿ.ಆರ್ ಗಳನ್ನು ಬ್ಯಾಂಕ್ Confirmation ಪ್ರತಿಯೊಂದಿಗೆ ಮುಖ್ಯ ಲೆಕ್ಕಾಧಿಕಾರಿಗಳ ಕಛೇರಿಗೆ ಸಲ್ಲಿಸತಕ್ಕದ್ದು.

(iii) ಮುಖ್ಯ ಲೆಕ್ಕಾಧಿಕಾರಿಗಳು ಒಂದನೇ ಚಾಲ್ತಿ ಬಿಲ್ಲನ್ನು ಪಾವತಿಗೆ ಒಪ್ಪಿಕೊಳ್ಳುವ ಪೂರ್ವದಲ್ಲಿ ಮೂಲ ಐ.ಬಿ.ಎಸ್/ಎಫ್.ಡಿ.ಆರ್‌ಗಳನ್ನು ಬ್ಯಾಂಕ್ Confirmation ನೊಂದಿಗೆ ಪರಿಶೀಲಿಸಿಕೊಳ್ಳುವುದು. ಕಡ್ಡಾಯವಾಗಿ ಐ.ಬಿ.ಎಸ್/ಎಫ್.ಡಿ.ಆರ್ ವಹಿಗಳನ್ನು ನಿರ್ವಹಿಸಿ ಐ.ಬಿ.ಎಸ್/ಎಫ್.ಡಿ.ಆರ್ ಒಪ್ಪಿಕೊಳ್ಳುವ/ಬಿಡುಗಡೆಗೊಳಿಸುವ ಬಗ್ಗೆ ನಿಯಮಾನುಸಾರ ಕ್ರಮ ವಹಿಸುವುದು.

(iv) ವಿಭಾಗ ಕಛೇರಿಗಳಲ್ಲಿ ಸ್ವೀಕೃತಗೊಳ್ಳುವ ಎಲ್ಲಾ ವಿಧವಾದ (Including unbalanced bid and APS) ಐ.ಬಿ.ಎಸ್/ಎಫ್.ಡಿ.ಆರ್‌ಗಳನ್ನು ಈ ಕೂಡಲೇ ಮುಖ್ಯ ಲೆಕ್ಕಾಧಿಕಾರಿಗಳ ಕಛೇರಿಗೆ ಸಲ್ಲಿಸುವುದು. ಯಾವುದೇ ಕಾರಣಕ್ಕೂ ವಿಭಾಗ ಕಛೇರಿಯಲ್ಲಿ ಐ.ಬಿ.ಎಸ್/ಎಫ್.ಡಿ.ಆರ್‌ಗಳನ್ನು ಮುಖ್ಯ ಲೆಕ್ಕಾಧಿಕಾರಿಗಳ ಕಛೇರಿಗೆ ಸಲ್ಲಿಸದೇ ಕಾರ್ಯಪಾಲಕ ಇಂಜನೀಯರವರ ಸುಪರ್ದಿಯಲ್ಲಿ ಇಟ್ಟುಕೊಂಡಲ್ಲಿ ಆದಕ್ಕೆ ಕಾರ್ಯಪಾಲಕ ಇಂಜನೀಯರ್ ಹಾಗೂ ವಿಭಾಗ ಕಛೇರಿಯ ಲೆಕ್ಕ ಪತ್ರ ಶಾಖೆಯ ಸಿಬ್ಬಂದಿಗಳನ್ನು ನೇರವಾಗಿ ಜವಾಬ್ದಾರರನ್ನಾಗಿ ಮಾಡಲಾಗುವುದು.

(v) ಆಯಾ ಆರ್ಥಿಕ ವರ್ಷದ ಅಂತ್ಯಕ್ಕೆ ವಿಭಾಗ ಕಛೇರಿಯಲ್ಲಿ ನಿರ್ವಹಿಸಿದ ಐ.ಬಿ.ಎಸ್/ಎಫ್.ಡಿ.ಆರ್ ವಹಿ ಹಾಗೂ ಮುಖ್ಯ ಲೆಕ್ಕಾಧಿಕಾರಿಗಳ ಕಛೇರಿಯಲ್ಲಿ ಸಂಬಂಧಪಟ್ಟ ವಿಭಾಗದ ಕಾರ್ಯಭಾರವನ್ನು ಹಂಚಿಕೆ ಮಾಡಲಾದ ವಿಷಯ ನಿರ್ವಾಹಕರುಗಳು ನಿರ್ವಹಿಸಿದ ಐ.ಬಿ.ಎಸ್/ಎಫ್.ಡಿ.ಆರ್ ವಹಿಯೊಂದಿಗೆ ಪರಿಶೀಲಿಸಿಕೊಂಡು ಸಮನ್ವಯಗೊಳಿಸುವುದು.

(vi) ಟೆಂಡರ್ ಷರತ್ತುಗಳನ್ವಯ ಐ.ಬಿ.ಎಸ್/ಎಫ್.ಡಿ.ಆರ್‌ಗಳನ್ನು ಬಿಡುಗಡೆಗೊಳಿಸುವ ಕುರಿತು ಕ್ರಮ ವಹಿಸುವುದು. ಟೆಂಡರ್ ಷರತ್ತುಗಳನ್ನು ಉಲ್ಲಂಘಿಸಿ ವಿಭಾಗ ಕಛೇರಿಯಿಂದ ಎಫ್.ಡಿ.ಆರ್/ಐ.ಬಿ.ಎಸ್‌ಗಳನ್ನು ಗುತ್ತಿಗೆದಾರರಿಗೆ ಹಿಂದಿರುಗಿಸಿದಲ್ಲಿ ನಿಗಮಕ್ಕೆ ಆರ್ಥಿಕ ನಷ್ಟವೆಂದು ಪರಿಗಣಿಸಿ ಸಂಬಂಧಪಟ್ಟ ಕಾರ್ಯಪಾಲಕ ಇಂಜನೀಯರುಗಳ ಮೇಲೆ ನಿಯಮಾನುಸಾರ ಕ್ರಮ ಜರುಗಿಸಲಾಗುವುದು.

(vii) ಉಲ್ಲೇಖ (1) ರ ಮತ್ತು ಈಗಾಗಲೇ ನೀಡಿರುವ ಸುತ್ತೋಲೆಯಲ್ಲಿನ ಎಲ್ಲಾ ಮಾರ್ಗಸೂಚಿಗಳು ಯಥಾವತ್ತಾಗಿ ಮುಂದುವರೆಯುತ್ತವೆ. ಯಾವುದೇ ಬದಲಾವಣೆ ಇರುವುದಿಲ್ಲ.

(viii) ಮುಖ್ಯ ಲೆಕ್ಕಾಧಿಕಾರಿಗಳು ಮೇಲಿನ ಎಲ್ಲಾ ಅಂಶಗಳನ್ನು ಪರಿಶೀಲಿಸಿ ನಿಯಮಾನುಸಾರ ನಿರ್ವಹಿಸಲು ಮತ್ತು ವಿಭಾಗ ಕಛೇರಿಗಳಿಗೆ ಅವಶ್ಯವಿದ್ದಲ್ಲಿ ಸ್ಪಷ್ಟೀಕರಣ ನೀಡಲು ಸೂಚಿಸಿದೆ.

4. ಮೇಲ್ಕಂಡ ಎಲ್ಲಾ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು ಹಾಗೂ ಐ.ಬಿ.ಎಸ್/ಎಫ್.ಡಿ.ಆರ್‌ಗಳನ್ನು ಒಪ್ಪಿಕೊಳ್ಳುವ/ನಿರ್ವಹಿಸುವ ಹಾಗೂ ಬಿಡುಗಡೆಗೊಳಿಸುವಲ್ಲಿ ಉಲ್ಲೇಖ (1) ರಲ್ಲಿ ವಿಧಿಸಿದ ಮತ್ತು ಮೇಲೆ ವಿವರಿಸಿದ

.....3/-

ಯಾವುದೇ ಮಾರ್ಗಸೂಚಿಗಳನ್ನು ಉಲಂಘಿಸಿದಲ್ಲಿ ನಿಗಮದ ಆರ್ಥಿಕ ದುರ್ಬಳಕೆ ಎಂದು ಪರಿಗಣಿಸಿ ತಪ್ಪಿತಸ್ಥ ಧಿಕಾರಿ/ಸಿಬ್ಬಂದಿಗಳ ಮೇಲೆ ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) (ಸಿ.ಸಿ.ಎ) ಯಮಾವಳಿಗಳ ಪ್ರಕಾರ ಶಿಸ್ತು ಕ್ರಮ ಜರುಗಿಸಲಾಗುವುದು. ಈ ಸುತ್ತೋಲೆಯು ಈ ತಕ್ಷಣದಿಂದ ಜಾರಿಗೆ ಬರುತ್ತದೆ.

ವ್ಯವಸ್ಥಾಪಕ ~~ನಿರ್ದೇಶಕರು~~
ಕನೀನಿನಿ, ನೋಂದಾಯಿತ ಕಛೇರಿ,
ಬೆಂಗಳೂರು.

ತಿಯನ್ನು:-

1. ನಿಗಮದ ಎಲ್ಲಾ ಮುಖ್ಯ ಇಂಜಿನೀಯರ/ಅಧೀಕ್ಷಕ ಇಂಜಿನೀಯರ/ಕಾರ್ಯಪಾಲಕ ಇಂಜಿನೀಯರಗಳಿಗೆ.
2. ಪ್ರಧಾನ ವ್ಯವಸ್ಥಾಪಕರು (ಹಣಕಾಸು) ಕನೀನಿನಿ, ನೋಂದಾಯಿತ ಕಛೇರಿ ಬೆಂಗಳೂರು.
3. ಮುಖ್ಯ ಆಡಳಿತಾಧಿಕಾರಿಗಳು/ ಮುಖ್ಯ ಲೆಕ್ಕಾಧಿಕಾರಿಗಳು ಕನೀನಿನಿ, ಕೇಂದ್ರ ಕಛೇರಿ ಧಾರವಾಡ.